**ಸಾಕ್ಷಿಗೆ ದಿನಾಂಕ 12-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ *2* ನೇ ಎದುರುದಾರರ ಪರ ಶ್ರೀ ಕೆ ಎಸ್ ವಕೀಲರಿಂದಃ**

1. ಅರ್ಜಿದಾರರಿಗೆ ನಾನು ವೈಯಕ್ತಿಕವಾಗಿ ಚಿಕಿತ್ಸೆ ನೀಡಿಲ್ಲ. ಅರ್ಜಿದಾರರಿಗೆ ಸಂಬಂಧಿಸಿದಂ ಡಿಸ್ಚಾರ್ಜ್ ಸಮ್ಮರಿಯನ್ನು ಮಾತ್ರ ನೋಡಿರುತ್ತೇನೆ. ಅರ್ಜಿದಾರರ ಗಾಯದ ಪ್ರಮಾಣಪತ್ರ, ಹಳೆಯ ಎಕ್ಸ್ ರೇ ಮತ್ತು ಹಳೆಯ ಕೇಸ್ ಶೀಟ್ ಗಳನ್ನು ನೋಡಿರುವುದಿಲ್ಲ. ಅರ್ಜಿದಾರರು ಮುಂದುವರೆದ ಚಿಕಿತ್ಸೆ ಪಡೆದ ಬಗ್ಗೆ ಮಾಹಿತಿ ನೀಡಿದ್ದು ಆದರೆ ದಾಖಲೆಗಳನ್ನು ನೋಡಿರುವುದಿಲ್ಲ. ಅರ್ಜಿದಾರರ ಇತ್ತೀಚಿನ ಎಕ್ಸ್ ರೇ ತೆಗೆಸಿರುತ್ತೇನೆ. ಅರ್ಜಿದಾರರ ಕ್ಷ-ಕಿರಣ ಹಾಜರುಪಡಿಸಿರುತ್ತೇನೆ. ಅರ್ಜಿದಾರರ ಮೂಳೆಮುರಿತ ಕೂಡಿಕೊಂಡಿರುತ್ತದೆ.

2. ಅರ್ಜಿದಾರರ ಸೊಂಟ ಮತ್ತು ಹಿಮ್ಮಡಿಯಲ್ಲಿ ಯಾವುದೇ ಮೂಳೆಮುರಿತಗಳು ಉಂಟಾಗಿಲ್ಲ ಎಂದರೆ ಸರಿ. ಹಿಮ್ಮಡಿಯಲ್ಲಿ ಯಾವುದೇ ಮೂಳೆಮುರಿತ ಉಂಟಾಗದೇ ಇದ್ದರೇ ಚಲನ-ವಲನಕ್ಕೆ ತೊಂದರೆಯಾಗುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಮೊಣಕಾಲಿನ ಸಂದಿಯಲ್ಲಿ ಮೂಳೆಮುರಿತವಾಗಿರುತ್ತದೆ. ಅರ್ಜಿದಾರರ ಒಳಜೋಡಣೆ ಹಾಗೆಯೇ ಇರುತ್ತದೆ. ಒಳಜೋಡಣೆ ತೆಗೆದ ನಂತರ ಅರ್ಜಿದಾರರ ನಿಖರವಾದ ಅಂಗನ್ಯೂನತೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ.

3. ಅರ್ಜಿದಾರರನ್ನು ಎಷ್ಟು ಮೆಟ್ಟಿಲನ್ನು ಹತ್ತಿಸಿದೆ ಮತ್ತು ಇಳಿಸಿದೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಅರ್ಜಿದಾರರ ಮಾಂಸಖಂಡ ಸಾಮರ್ಥ್ಯದಲ್ಲಿ ಕುಂಠಿತವಾಗಿರುವುದಿಲ್ಲ. ಅರ್ಜಿದಾರರಿಗ ನಿಗದಿತ ಅಂಗಕ್ಕೆ ಶೇ.68 ಅಂಗನ್ಯೂನತೆ ಮತ್ತು ಸಂಪೂರ್ಣ ದೇಹಕ್ಕೆ ಶೇ.34 ಅಂಗನ್ಯೂನತೆಯನ್ನು ಹೇಗೆ ನಿರ್ಧರಿಸಲಾಯಿತು ಎಂದು ಹೊರರೋಗಿ ದಾಖಲೆಯಲ್ಲಿ ನಮೂದಾಗಿರುತ್ತದೆ.

4. ಅರ್ಜಿದಾರರ ನಿಗಧಿತ ಅಂಗಕ್ಕೆ ನೀಡಲಾದ ಶೇಕಡಾ ಪ್ರಮಾಣದ 1/3 ರಷ್ಟು ಭಾಗಾಂಶವನ್ನು ಸಂಪೂರ್ಣ ದೇಹಕ್ಕೆ ಅಳವಡಿಸಿಲ್ಲ ಎಂದರೆ ಸರಿ. ಅರ್ಜಿದಾರರ ಒಳಜೋಡಣೆ ತೆಗೆದರೆ ಅವರು ಮೊದಲಿನಂತೆ ಆಗುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾನು ಯಾವುದೇ ಮುಂದುವರೆದ ಚಿಕಿತ್ಸೆಯ ಸಲಹೆ ನೀಡಿಲ್ಲ. ಅರ್ಜಿದಾರರಿಗೆ ಯಾವುದೇ ತೊಂದರೆ ಇರದ ಕಾರಣ ಮುಂದುವರೆದ ಚಿಕಿತ್ಸೆಗೆ ಸಲಹೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಶಸ್ತ್ರಚಿಕಿತ್ಸೆ ಮಾಡಿಲ್ಲ ಆದರೆ ವೈದ್ಯರ ತಂಡದಲ್ಲಿ ಒಬ್ಬನಾಗಿದ್ದೆ.

5. ನಮ್ಮ ಆಸ್ಪತ್ರೆಯಲ್ಲಿ ವೈದ್ಯಕೀಯ ಮಂಡಳಿ ಇದೆ ಎಂದರೆ ಸರಿ, ಅರ್ಜಿದಾರರನ್ನು ಅಲ್ಲಿಗೆ ಶಿಫಾರಸ್ಸು ಮಾಡಿ ಅಂಗನ್ಯೂನತೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಅರ್ಜಿದಾರರ ವೃತ್ತಿಪರ ಅಂಗನ್ಯೂನತೆಯನ್ನು ನಿರ್ಧರಿಸಿರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ನಾನು ಚಿಕಿತ್ಸೆ ನೀಡದೇ ಇರುವ ಕಾರಣ ಅಂಗನ್ಯೂನತೆ ನಿರ್ಧರಿಸಲು ಸೂಕ್ತ ವ್ಯಕ್ತಿಯಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ತೊಂದರೆ ಇಲ್ಲದೇ ಇದ್ದರೂ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಒಂದನೇ ಎದುರುದಾರರು ಏಕ-ಪಕ್ಷೀಯ. ಈ ಕಾರಣದಿಂದ ಅವರ ಪರ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**